

# ಚುಕ್ಕೆ ಮುನಿಯಾ

ಇದೇನು ದುನಿಯಾ ವಿಜಿಯವರ ಹೊಸ ಚಿತ್ರವಲ್ಲ, ಒಂದು ಸಣ್ಣ ಪಕ್ಷಿಯ ಹೆಸರು. ನೋಡಲು ಬಣ್ಣಬಣ್ಣದ ಗುಬ್ಬಿಯ ಹಾಗೆ ಕಾಣುವ, ಗುಬ್ಬಿಯ ದೂರದ ಸಂಬಂಧಿ. ಚುಕ್ಕೆಮುನಿಯಾ ಮುನಿಯಗಳ ಒಂದು ಪ್ರಭೇದ. ಹೆಚ್ಚಾಗಿ ಇವು ಹುಲ್ಲುಗಾವಲು ಮತ್ತು ಗದ್ದೆಯ ಪ್ರದೇಶಗಳಲ್ಲಿ ಕಂಡುಬರುತ್ತವೆ.

ಇವುಗಳ ಮುಖ್ಯ ಆಹಾರ ಭತ್ತ ಮತ್ತು ಇತರ ಹುಲ್ಲಿನ ಬೀಜಗಳು. ಒಮ್ಮೊಮ್ಮೆ ಹಿಂಡು ಹಿಂಡಾಗಿ ಬರುವ ಮುನಿಯಾಗಳು ರೈತನ ಗದ್ದೆಯ ಮೇಲೆ ದಾಳಿ ಮಾಡಿ ಬೆಳೆಯನ್ನು ಹಾಳು ಮಾಡುತ್ತವೆ. ಕೆಲವೊಂದು ಹಿಂಡಿನಲ್ಲಿ ಇವುಗಳ ಸಂಖ್ಯೆ ಸಾವಿರದವರೆಗೂ ಇದ್ದು, ಇವುಗಳ ಕಾಟ ತಾಳಲಾರದೆ ರೈತರು ಈ ಹಕ್ಕಿಯ ಬೇಟೆಗೆ ನಿಲ್ಲುತ್ತಾರೆ. ಹಳ್ಳಿ ಮತ್ತು ಕಾಡನ್ನು ಹೊರತುಪಡಿಸಿ ನಗರದ ಹೊರವಲಯದಲ್ಲೂ ಈ ಪಕ್ಷಿ ಕಾಣಸಿಗುತ್ತದೆ.



ಟಿಕೀ ಟಿಕೀ ಎಂದು ಗೆಜ್ಜೆಯಂತೆ ಸದ್ದು ಮಾಡುವ ಇವು ಗಾಢ ಕಂದು ಬಣ್ಣ ಹೊಂದಿದ್ದು, ಎದೆಯ ಕೆಳಬಾಗದಲ್ಲಿ ಕಪ್ಪಾದ ಚುಕ್ಕೆಗಳಿರುತ್ತವೆ. ಹುಲ್ಲಿನ ಎಸಳನ್ನು ಒಂದೆಡೆ ಸೇರಿಸಿ ನೆಲದಿಂದ ಸುಮಾರು 6 ಅಡಿ ಎತ್ತರದಲ್ಲಿ ದಟ್ಟವಾದ ಪೊದೆಗಳಲ್ಲಿ ಇವು ಗೂಡು ರಚಿಸುತ್ತವೆ. ಕಡ್ಡಿ ಮತ್ತು ಹುಲ್ಲಿನ ಸಣ್ಣ ರಾಶಿಯಂತೆ ಕಾಣುವ ಗೂಡು ನೋಡಲು ಅಷ್ಟೇನೂ ಚೆನ್ನಾಗಿರುವುದಿಲ್ಲ. ಇವುಗಳಿಗೆ ಹುಲ್ಲಿನಿಂದ ಗೂಡನ್ನು ಹೆಣೆಯಲು ಆಗುವುದಿಲ್ಲ, ಆದರೆ ಗೂಡು ರಚಿಸುವಾಗ ಗಂಡು ಹಾಗು ಹೆಣ್ಣು ಹಕ್ಕಿ ಪರಸ್ಪರ ಸಹಕರಿಸುತ್ತವೆ. ಈ ಗೂಡು ಗುಂಡಗಿದ್ದು, ಸಣ್ಣ ವೃತ್ತಾಕಾರದ ಬಾಗಿಲು ಇರುತ್ತದೆ. 4–5 ಬಿಳಿಯ ಬಣ್ಣದ ಮೊಟ್ಟೆಗಳನ್ನಿಡುವ ಈ ಪಕ್ಷಿ, ಮೊಟ್ಟೆ ಒಡೆದು ಮರಿಯಾಗಲು 2 ವಾರ ಬೇಕು. ಗಂಡು–ಹೆಣ್ಣು ಎರಡೂ ಮೊಟ್ಟೆಗಳಿಗೆ ಕಾವು ನೀಡುತ್ತವೆ. ಮರಿಗಳು 18–20 ದಿನಗಳಲ್ಲಿ ಹಾರಲು ಕಲಿತು ಗೂಡನ್ನು ತೊರೆಯುತ್ತವೆ. ಮರಿಗಳು ತಿಳಿ ಕಂದು ಬಣ್ಣದಲ್ಲಿದ್ದು, ಚುಕ್ಕೆಗಳಿರುವುದಿಲ್ಲ. ಬೆಳೆಯುತ್ತಾ ಹೋದಂತೆ ಇವು ಗಾಢ ಕಂದು ಬಣ್ಣಕ್ಕೆ ತಿರುಗುತ್ತವೆ.

ಗೂಡು ಕಟ್ಟಲು ಜಾಗ ಹುಡುಕುವುದರಿಂದ ಹಿಡಿದು ಮರಿಗಳನ್ನು ಸಲಹುವ ತನಕ ಗಂಡು ಹೆಣ್ಣು ಒಂದಕ್ಕೊಂದು ಸಹಕರಿಸುತ್ತವೆ. ಕೆಲವೆಡೆ ಇವುಗಳ ಸ್ವಾತಂತ್ರವನ್ನು ಕಿತ್ತು ಪಂಜರದಲ್ಲಿ ಬಂಧಿಸಿ ಸಾಕುವುದೂ ಇದೆ. ಬಾನಾಡಿಗಳು ಬಾನಿನಲ್ಲಿ ಹಾರಾಡಿದರೆ ನೋಡಲು ಚಂದವೇ ಹೊರತು ಪಂಜರದ ಬಂಧಿಯಾಗಿ ಅಲ್ಲ.

■ ಚಂದನ್. ಪಿ